ಮದ್ರಾಸ್ ಮನೆಯಲ್ಲಿ ಹೇಳಿದರು. ನಾವೆಲ್ಲ ನಿತ್ಯ ಸೇರುತ್ತಿದ್ದ ಮನೆಯ ರೌಂಡ್ ಟೇಬಲ್ ಸುತ್ತ ಕೂತು ಮಾತಾಡುತ್ತಿದ್ದಾಗ ಪ್ರಾಣೇಶಾಚಾರ್ಯನ ತಾಕಲಾಟಗಳು; ಯಾವುದು ನ್ಯಾಯ; ಯಾವುದು ನೈತಿಕವಾಗಿ ಸರಿ; ಸಾಂಪ್ರದಾಯಿಕ ನಿಯಮಗಳ ಒತ್ತಾಯಗಳು; ಧರ್ಮ–ಸಮಾಜಗಳ ಕಟ್ಟಳೆಗಳು ಹಾಗೂ ಆತ್ಮಸಾಕ್ಷಿಯ ನಡುವಣ ತಿಕ್ಕಾಟ... ಇವೆಲ್ಲ ನಮ್ಮ ಅರಿವಿಗೆ ಬರತೊಡಗಿದವು.'

ಲೋಹಿಯಾ ಚಿಂತನೆಯನ್ನು ಚೆನ್ನಾಗಿ ಗ್ರಹಿಸಿದ್ದ ಗೋಪಾಲಗೌಡರು 1965ರಲ್ಲಿ ಪ್ರಕಟವಾಗಿದ್ದ 'ಸಂಸ್ಕಾರ'ವನ್ನು ಓದಿದ್ದ ರೀತಿ ಸೂಕ್ಷ್ಮವಾಗಿತ್ತು. 'ಸಂಸ್ಕಾರ' ಕಾದಂಬರಿಯು ಡಿ.ಎಚ್. ಲಾರೆನ್ಸ್ ಮನುಷ್ಯರ ಕಾಮಮೂಲ ವರ್ತನೆಯನ್ನು ಅರಿಯುತ್ತಿದ್ದ ರೀತಿ; ಸಾರ್ತರ್‌ನ ಅಸ್ತಿತ್ವವಾದ; 'ದ ಸ್ಕಾರ್ಲೆಟ್ ಲೆಟರ್' ಕಾದಂಬರಿಯ ಪಾದ್ರಿಯ ನೈತಿಕ ಬಿಕ್ಕಟ್ಟು – ಇವೆಲ್ಲವುಗಳಿಂದ ಪ್ರೇರಣೆ ಪಡೆದಂತಿದೆ; ಆದರೆ ಸಾಂಪ್ರದಾಯಿಕ ಸಮಾಜವನ್ನು ವಿಮರ್ಶಿಸುವ ಕ್ರಮವನ್ನು ಕಾದಂಬರಿಕಾರನ ಸ್ವ–ಸಮಾಜ ವಿಮರ್ಶೆ, ಲೋಹಿಯಾರ ಜಾತಿವಿನಾಶ ತತ್ವ ಹಾಗೂ ಶೂದ್ರ–ಬ್ರಾಹ್ಮಣ ಸಂಗಮದ ಆಶಯಗಳು ರೂಪಿಸಿದಂತಿವೆ.

ಪಟ್ಟಾಭಿರಾಮರೆಡ್ಡಿ ನಿರ್ದೇಶಿಸಿದ 'ಸಂಸ್ಕಾರ' ಸಿನಿಮಾ 1970ರಲ್ಲಿ ಬಿಡುಗಡೆಯಾಗಿ ಒಂದು ಮಂಥನವನ್ನೇ ಸೃಷ್ಟಿಸಿತು. ಸ್ನೇಹಲತಾ ಚಂದ್ರಿಯಾಗಿ, ಗಿರೀಶ್ ಕಾರ್ನಾಡ್ ಪ್ರಾಣೇಶಾಚಾರ್ಯನಾಗಿ, ಲಂಕೇಶ್ ನಾರಣಪ್ಪನಾಗಿ ನಟಿಸಿದ್ದರು.

ಲೋಹಿಯಾರ ಆಪ್ತರ ಮನೆಯಲ್ಲಿ ರಾಮಮನೋಹರರ ಹೆಸರು ಮುಂದುವರಿದಿದ್ದನ್ನು ನಂದನಾ ನೆನೆಯುತ್ತಾರೆ: ಪಟ್ಟಾಭಿ–ಸ್ನೇಹಲತಾರ ಮಗ ಕೊನಾರ್ಕ್ ಮನೋಹರ್; ಗೋಪಾಲಗೌಡರ ಮಗ ರಾಮ್‌ಮನೋಹರ್; ಕರ್ನಾಟಕದ ಸಮಾಜವಾದಿ ಪಕ್ಷದ ಅಧ್ಯಕ್ಷರಾಗಿದ್ದ ಸಿ.ಜಿ.ಕೆ. ರೆಡ್ಡಿಯವರ ಮೂವರು ಮಕ್ಕಳ ಹೆಸರು: ರಾಮ್, ಮನೋಹರ್, ರಾಮ್‌ಮನೋಹರ್; ಅರುಣಾ–ರಾವಿಲ ಸೋಮಯ್ಯನವರ ಮಗ ಲೋಹಿಯಾ; ಇವರ ಜೊತೆಗೇ ಹೊಸ ತಲೆಮಾರಿನ ಪತ್ರಕರ್ತ ಎನ್.ಡಿ. ತಿಪ್ಪೇಸ್ವಾಮಿಯವರ ಮಗ ರಾಮಮನೋಹರ... ಹೀಗೆ ಸಮಾಜವಾದಿ ಕುಟುಂಬಗಳಲ್ಲಿ ರಾಮ್‌ಮನೋಹರ್ ಹುಟ್ಟಿ ಬೆಳೆಯತೊಡಗಿದರು.

ತೇಜಸ್ವಿ, ಲಂಕೇಶ್, ಶ್ರೀಕೃಷ್ಣ ಆಲನಹಳ್ಳಿ, ಶಿವತೀರ್ಥನ್, ಚಂದ್ರಶೇಖರ ಪಾಟೀಲ, ಬೆಸಗರಹಳ್ಳಿ ರಾಮಣ್ಣ, ಹಾ.ಮಾ. ಪಟೇಲ, ಇಳಾ ವಿಜಯಾ, ವಿಜಯಾ ದಬ್ಬೆ, ಸರ್ವಮಂಗಳ, ಪದ್ಮಾ ಶ್ರೀರಾಮ್, ಸವಿತಾ ನಾಗಭೂಷಣ, ಸುಜಾತ ಕುಮಟ, ಮೀರಾ ಚಕ್ರವರ್ತಿ ಮುಂತಾದ ಹಲವು ಸೃಜನಶೀಲ ಲೇಖಕ, ಲೇಖಕಿಯರನ್ನು ಲೋಹಿಯಾ ಚಿಂತನೆ, ಸಮಾಜವಾದಿ ಪಕ್ಷ ಹಾಗೂ ಗೋಪಾಲಗೌಡರ ರಾಜಕಾರಣ ರೂಪಿಸಿತು. ಜಾತಿಪದ್ಧತಿಯನ್ನು ಸೂಕ್ಷ್ಮವಾಗಿ ಗ್ರಹಿಸಿ, ಜಾತಿವಿನಾಶದ ಆಶಯವನ್ನು ಕೈಗೆತ್ತಿಕೊಳ್ಳುವಂತೆ ಪ್ರೇರೇಪಿಸಿತು.

ಎಂ.ಡಿ. ನಂಜುಂಡಸ್ವಾಮಿ ಲೋಹಿಯಾರ 'ಇಂಟರ್ವಲ್ ಡ್ಯೂರಿಂಗ್ ಪಾಲಿಟಿಕ್ಸ್' ಪುಸ್ತಕವನ್ನು ಕನ್ನಡಿಸಲು ಕೆ.ವಿ. ಸುಬ್ಬಣ್ಣನವರಿಗೆ ಕೊಟ್ಟರು. ಬಳಿಕ, ಮೂಡಿಗೆರೆಯ ತೇಜಸ್ವಿಯವರ ಮನೆಯ ಜಗಲಿಯ ಮೇಲೆ ಲೋಹಿಯಾರ ಪುಸ್ತಕಗಳನ್ನು ಹರಡಿಕೊಂಡು ತೇಜಸ್ವಿ–ಎಂ.ಡಿ.ಎನ್. ಕೂತರು. ಆಯ್ದ ಲೋಹಿಯಾ ಚಿಂತನೆಗಳನ್ನು ಕನ್ನಡಕ್ಕೆ ಅನುವಾದಿಸಿ ಲೋಹಿಯಾ ರೆಡ್ ಬುಕ್ ಸಿದ್ಧಪಡಿಸತೊಡಗಿದರು.

1970ರಲ್ಲಿ ಸುಬ್ಬಣ್ಣನವರ ಅಕ್ಷರ ಪ್ರಕಾಶನದಿಂದ 'ರಾಜಕೀಯದ ಮಧ್ಯೆ ಬಿಡುವು' ಪ್ರಕಟವಾಯಿತು; ಮತ್ತೆ ಮತ್ತೆ ಪ್ರಕಟವಾಗುತ್ತಾ ಕನ್ನಡದ ಮಹತ್ವದ ಸಾಂಸ್ಕೃತಿಕ ಪಠ್ಯವಾಯಿತು.

1971ರ ಕೊನೆಯಲ್ಲಿ ತೀರ್ಥಹಳ್ಳಿಯಲ್ಲಿ 'ಲೋಹಿಯಾ ವಿಚಾರ್ ಮಂಚ್' ಪ್ರಕಟಿಸಿದ ಲೋಹಿಯಾ ರೆಡ್ ಬುಕ್; ಕೋಣಂದೂರು ಲಿಂಗಪ್ಪ ಸಂಪಾದಿಸಿದ 'ಶಾಸನಸಭೆಯಲ್ಲಿ ಶಾಂತವೇರಿ' ಎರಡೂ ಬಿಡುಗಡೆಯಾದವು. ರೆಡ್ ಬುಕ್‌ಗೆ ಕುವೆಂಪು ಮುನ್ನುಡಿ ಬರೆದಿದ್ದರು. ಕಿಶನ್ ಪಟ್ನಾಯಕ್, ಗೋಪಾಲಗೌಡ, ಲಂಕೇಶ್, ಕಡಿದಾಳು ಶಾಮಣ್ಣ ಆ ಸಭೆಯಲ್ಲಿದ್ದರು. ರೆಡ್ ಬುಕ್ ಸಮಾಜವಾದಿಗಳ ಕೈಪಿಡಿಯಾಯಿತು. ಬಿ.ಎನ್. ಶ್ರೀರಾಮ್, ಪ. ಮಲ್ಲೇಶ್, ಟಿ.ಎನ್. ನಾಗರಾಜ್, ಕಿ.ರಂ. ನಾಗರಾಜ್, ಈ ಎರಡು ರೂ. ಬೆಲೆಯ ಪುಸ್ತಕವನ್ನು ಬೀದಿಗಳಲ್ಲಿ ಮಾರಿದರು; ವಿದ್ಯಾರ್ಥಿ ಸಮುದಾಯಕ್ಕೂ ಒಯ್ದರು.

* * *

ಸಮಾಜವಾದಿ ಪಕ್ಷದ ಶಾಸಕರಾಗಿದ್ದ ಶಾಂತವೇರಿ ಗೋಪಾಲಗೌಡರು 1972ರ ಆರಂಭದಲ್ಲಿ ಪಾರ್ಶ್ವವಾಯುವಿಗೆ ತುತ್ತಾದರು. ಅವರು 1972ರ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸುವುದು ಕಷ್ಟವಾಗತೊಡಗಿತು; ಆಗ ತೀರ್ಥಹಳ್ಳಿ ಕ್ಷೇತ್ರದಿಂದ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಲು ಪೂರ್ಣಚಂದ್ರ ತೇಜಸ್ವಿಯವರೇ ತಕ್ಕವರು ಎಂದು ಗೋಪಾಲಗೌಡರು ನಿರ್ಧರಿಸಿದರು. ಚುನಾವಣೆಗೆ ನಿಲ್ಲುವಂತೆ ತೇಜಸ್ವಿಯವರ ಮನವೊಲಿಸಲು ಕೋಣಂದೂರು ಲಿಂಗಪ್ಪನವರನ್ನು ಕಳಿಸಿದರು.

ಕಡಿದಾಳ್ ಶಾಮಣ್ಣನವರ ಕಾರಿನಲ್ಲಿ ಕೋಣಂದೂರು ಲಿಂಗಪ್ಪ ಮೂಡಿಗೆರೆಗೆ ಹೊರಟರು. ಮೂಡಿಗೆರೆಯ ತಹಸೀಲ್ದಾರ್ ಆಫೀಸಿನ ಬಳಿ ಇಳಿದ ಲಿಂಗಪ್ಪ, ತೇಜಸ್ವಿ ಚುನಾವಣೆಗೆ ಸ್ಪರ್ಧಿಸಲು ಅಗತ್ಯವಾಗಿದ್ದ ಮತದಾರರ ಪಟ್ಟಿ ತೆಗೆದುಕೊಳ್ಳಲು ಹೊರಟರು. ಶಾಮಣ್ಣ ತೇಜಸ್ವಿಯವರನ್ನು ಕರೆತರಲು ತೇಜಸ್ವಿಯವರ ತೋಟಕ್ಕೆ ಹೊರಟರು.

ಲಿಂಗಪ್ಪ ಮತದಾರರ ಪಟ್ಟಿಯ ದೃಢೀಕೃತ ಪ್ರತಿ ತೆಗೆದುಕೊಳ್ಳುವ ಹೊತ್ತಿಗೆ ಶಾಮಣ್ಣ, ತೇಜಸ್ವಿ ಬಂದರು. ಮೂವರೂ ಜೊತೆಗೂಡಿ ನಾಮಪತ್ರ ಸಲ್ಲಿಸಲು ತೀರ್ಥಹಳ್ಳಿಯ ಕಡೆ ಹೊರಟರು.

'ಲಿಂಗಪ್ಪಾ! ಅದೆಂತಾ ಎಲೆಕ್ಟೋರಲ್ ರೋಲು, ಕೊಡು ನೋಡಣ!' ಎಂದರು ತೇಜಸ್ವಿ.

ಲಿಂಗಪ್ಪ ಮತದಾರರ ಪಟ್ಟಿ ಕೊಟ್ಟರು. ತೇಜಸ್ವಿ ಪಟ್ಟಿಯನ್ನು ಪರಪರ ಹರಿದು ಹಾಕುತ್ತಾ ರೇಗಿದರು: 'ನೀವು ಎಲೆಕ್ಷನ್ನಿಗೆ ನಿಲ್ಲಿ ಅಂದ್ರೆ, ನನ್ನ ನಿಲ್ಲೋಕೆ ಬಂದಿದೀರೇನ್ರಿ?'. ಕೊನೆಗೆ ಕೋಣಂದೂರು ಲಿಂಗಪ್ಪನವರೇ ಚುನಾವಣೆಗೆ ನಿಲ್ಲಬೇಕಾಯಿತು. ಸೋಷಲಿಸ್ಟ್ ಪಕ್ಷ ಹಾಗೂ ಗೋಪಾಲಗೌಡರು ಸೃಷ್ಟಿಸಿದ್ದ ಸಮಾನತೆಯ ಪ್ರಜ್ಞೆಯುಳ್ಳ ಮತದಾರ, ಮತದಾರ್ತಿಯರು ಜಾತಿ, ಹಣದ ಬಲವಿಲ್ಲದ ಲಿಂಗಪ್ಪನವರನ್ನು ತೀರ್ಥಹಳ್ಳಿ ಕ್ಷೇತ್ರದಲ್ಲಿ ಗೆಲ್ಲಿಸಿದರು.

1972ರ ಜೂನ್ 9ರಂದು ನಲವತ್ತೊಂಬತ್ತನೆಯ ವಯಸ್ಸಿನಲ್ಲಿ ಗೋಪಾಲಗೌಡರು ತೀರಿಕೊಂಡರು. ಆಗ ಬೆಸಗರಹಳ್ಳಿ ರಾಮಣ್ಣ ಬರೆದ 'ಗೋಪಾಲಗೌಡರಿಗೆ' ಎಂಬ ಪದ್ಯದಲ್ಲಿ 'ಸಮಾಜವಾದದ ಚಕ್ರವರ್ತಿ ಲೋಹಿಯಾ ಮತ್ತು ನೀವು... ಅದೆಂಥ ಕೈಕೊಟ್ಟಿರಿ ನಮಗೆ' ಎಂಬ ದಿಗ್ಭ್ರಮೆಯಿತ್ತು. ಗೋಪಾಲಗೌಡರ ನೆನಪಿಗಾಗಿ ಕೋಣಂದೂರು ವೆಂಕಪ್ಪಗೌಡರು ಸಂಪಾದಿಸಿದ 'ಜೀವಂತ ಜ್ವಾಲೆ' ಎಂಬ ಚಾರಿತ್ರಿಕ ಮಹತ್ವದ ಕೃತಿ ಲೋಹಿಯಾಗೆ ಅರ್ಪಣೆಯಾಯಿತು.

ತೇಜಸ್ವಿ ಚುನಾವಣೆಗೆ ನಿಲ್ಲದಿದ್ದರೂ, ವಿಶಾಲ ಅರ್ಥದಲ್ಲಿ ಪೊಲಿಟಿಕಲ್ ಕತೆಗಾರ, ಕಾದಂಬರಿಕಾರರಾಗಿ ಮುಂದುವರಿದರು. ಲೋಹಿಯಾ ಚಿಂತನೆ ತಮ್ಮಲ್ಲಿ ಉಂಟು ಮಾಡಿದ್ದ ಪಲ್ಲಟಗಳನ್ನು ಕುರಿತು 1973ರಲ್ಲಿ ಪ್ರಕಟವಾದ 'ಅಬಚೂರಿನ ಪೋಸ್ಟಾಫೀಸು' ಕಥಾಸಂಕಲನದ 'ಹೊಸ ದಿಗಂತದೆಡೆಗೆ' ಮುನ್ನುಡಿಯಲ್ಲಿ ತೇಜಸ್ವಿ ಬರೆದ ಮಾತುಗಳು:

'ಲೋಹಿಯಾರವರ ತತ್ವಚಿಂತನೆ, ಕುವೆಂಪುರವರ ಕಲಾಸೃಷ್ಟಿ, ಕಾರಂತರ ಜೀವನದೃಷ್ಟಿ ಮತ್ತು ಬದುಕಿನ ಪ್ರಯೋಗಶೀಲತೆ – ಈ ಮೂರೇ ನನ್ನ ಈಚಿನ ಸಾಹಿತ್ಯರಚನೆಯ ಮೇಲೆ ಗಾಢ ಪರಿಣಾಮವನ್ನುಂಟು ಮಾಡಿರುವುವು. ಬಹುಶಃ ಮುಂಬರುವ ಕಲಾವಿದರಿಗೆ ಕನ್ನಡ ಸಾಹಿತ್ಯ ಸೃಷ್ಟಿಯಲ್ಲಿ ಚೈತನ್ಯಶಕ್ತಿಯಾಗಬಲ್ಲಂಥವು ಈ ಮೂರೇ.

'ನನ್ನ ಜೀವನವಿಧಾನವನ್ನು, ಗ್ರಹಿಸುವ ಕ್ರಮವನ್ನು, ಆಲೋಚನೆಯನ್ನು, ಅಭಿವ್ಯಕ್ತಿ ವಿಧಾನವನ್ನು, ಒಟ್ಟಿನಲ್ಲಿ ಇಡೀ ಸಮಗ್ರ ವ್ಯಕ್ತಿತ್ವವನ್ನು ಸಂಪೂರ್ಣ ಬದಲಿಸಿದ್ದು ಲೋಹಿಯಾರವರ ತತ್ವಚಿಂತನೆ. ಸದ್ಯದ ಭಾರತೀಯ ಸಂದರ್ಭದಲ್ಲಿ ಲೋಹಿಯಾ ಒಬ್ಬರೇ 'ಒರಿಜನಲ್' ಎಂದು ಹೇಳಬಹುದಾದ ತತ್ವಮೀಮಾಂಸಕರು... ಲೋಹಿಯಾರವರ ಆಲೋಚನೆಗಳನ್ನು ವಿಶ್ವವಿದ್ಯಾಲಯದೊಳಕ್ಕೆ ಅವರ ಜೀವಿತಕಾಲದಲ್ಲಿ ಬರದ ಹಾಗೆ ನೋಡಿಕೊಂಡ ನಮ್ಮ ಬುದ್ಧಿಜೀವಿಗಳ ಸಮೂಹ ಒಂದು ದುಷ್ಟಕೂಟ. ನಮ್ಮ ಭಾರತದಲ್ಲಿ ಬೇರೂರಿರುವ ಗುಲಾಮಶಾಹಿ ಮತ್ತು ಜಾತೀಯತೆಯ ಸ್ವರೂಪವನ್ನಷ್ಟೆ ಇದು ಶ್ರುತಪಡಿಸುತ್ತದೆ. ಲೋಹಿಯಾರವರ ಆಲೋಚನೆಗಳಿಗೆ ಪ್ರತಿಸ್ಪಂದಿಸದ ಚೇತನ ಭಾರತದ ಯಾವುದಕ್ಕೂ ಸ್ಪಂದಿಸಲಾರದು. ಅಂತೆಯೇ ಹೊಸ ಸಾಹಿತ್ಯಕ್ಕೂ ಕೂಡ.

'...ಈ ನಿಗೂಢ, ಅಪರಿಚಿತ ಭಾರತದ ಬಗ್ಗೆ ನನ್ನ ಕಣ್ಣು ತೆರೆಸಿದ್ದು ಲೋಹಿಯಾ... ಲೋಹಿಯಾರವರ ಕಾಣ್ಕೆ, ತತ್ವಚಿಂತನೆಗಳು ಮತ್ತು ಹಳ್ಳಿಯ ಜೀವನದ